ಶ್ರೀ ಎ. ಲಕ್ಷ್ಮಿಸಾಗರ್ (ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ).— ಅಧ್ಯಕ್ಷರೆ

ಮಿತವೇತನ ಉದ್ಯೋಗ ಯೋಜನೆಯನ್ನು ರಾಜ್ಯದಲ್ಲಿ ಜನವರಿ ೧೯೭೮ ರಿಂದ ಜಾರಿಗೊಳಿಸಲಾಯಿತು. ಕುಟುಂಬದಲ್ಲಿ ಯಾರೂ ಸಂಪಾದಿಸುವ ಸದಸ್ಯರಿಲ್ಲದ ಹಾಗೂ ಕುಟುಂಬದ ವಾರ್ಷಿಕ ಆದಾಯ ರೂ. ೩,೬೦೦ ಗಳಿಗೆ ಕಡಿಮೆ ಇರುವ ಕುಟುಂಬದ ಯಾರಾದರೂ ಪದವೀಧರರು, ಸ್ನಾತಕೋತ್ತರ ಪದವೀಧರ ಅಥವಾ ಡಿಪ್ಲೊಮೋ ಪಡೆದ ಅಭ್ಯರ್ಥಿಗಳಿಗೆ ಮಾಹೆಯಾನ ರೂ. ೧೫೦ ರಂತೆ ಮಿತವೇತನ ಆಧಾರದ ಮೇಲೆ ನೇಮಿಸಿಕೊಳ್ಳಲಾಯಿತು. ಅಂದಿನ ಅವರ ಒಟ್ಟು ಸಂಖ್ಯೆ ೧೪,೨೭೩ ಇದ್ದು ಈಗ ೭,೪೭೩ ಕ್ಕೆ ಇಳಿದಿದೆ. ಅಂದರೆ ೬,೮೦೦ ಮಿತವೇತನ ಪದವೀಧರರು ಲೋಕ ಸೇವಾ ಆಯೋಗದ ಮುಖಾಂತರ ಅಯ್ಕೆ ಪ್ರಾಧಿಕಾರಗಳಿಂದ ಆಯ್ಕೆಗೊಂಡು 'ಸಿ' ಗುಂಪಿನ ಹುದ್ದೆಗಳಿಗೆ ಈಗಾಗಲೇ ಸರ್ಕಾರದ ಇಲಾಖೆಗಳಲ್ಲಿ ನೇಮಕಗೊಂಡಿದ್ದಾರೆ. ಎಲ್ಲಾ ಸ್ನೈಪಂಡರಿ ಪದವೀಧರರನ್ನು ಖಾಯಂ ಉದ್ಯೋಗಿಗಳಂತೆ ಮಾಡಲು ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ವಿಶೇಷ) ನಿಯಮಾವಳಿಗಳು, ೧೯೮೫ನ್ನು ಹೊರಡಿಸಿದೆ. ಈ ನಿಯಮಾವಳಿಗಳ ಪ್ರಕಾರ ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ 'ಸಿ' ಗುಂಪಿನ ಹುದ್ದೆಗಳಲ್ಲಿ ಶೇಕಡ ೫೦ ರಷ್ಟು ಹುದ್ದೆಗಳನ್ನು ಸ್ನೈಪಂಡರಿ ಪದವೀಧರರಿಗೆ ಮತ್ತು ಸ್ಥಳೀಯ ಅಭ್ಯರ್ಥಿಗಳಿಗೆ ಕಾದಿರಿಸಲು ಮತ್ತು ಪದೋನ್ನತಿಯಲ್ಲಿ ರಿಯಾಯಿತಿಯನ್ನು ನೀಡಲಾಗಿದೆ. ಆದ್ದರಿಂದ ಪ್ರಾರಂಭದಲ್ಲಿ ಸ್ನೈಪಂಡರಿ ಪದವೀಧರರ ಸಂಖ್ಯೆ ೧೪,೨೭೩ ಇದ್ದದ್ದು ಈಗ ೭,೪೭೩ ಕ್ಕೆ ಇಳಿದಿದೆ. ಅಧಿಸೂಚನೆ ಸಂಖ್ಯೆ ಡಿಪಿಎಆರ್ ೪೮ ಎಸ್ಎಲ್ಸಿ ೮೬ ದಿನಾಂಕ ೪-೬-೮೭ರ ಪ್ರಕಾರ, ಮಿತವೇತನ ಪದವೀಧರರಿಗೆ ಶೇಕಡ ೪೦ ರಷ್ಟು ಹುದ್ದೆಗಳನ್ನು ನೇರ ನೇಮಕಾತಿಗಾಗಿ ಕಾದಿರಿಸಲಾಗಿದೆ.

ಸ್ನೈಪಂಡರಿ ಪದವೀಧರರನ್ನು ಖಾಯಂಗೊಳಿಸುವ ಉದ್ದೇಶದಿಂದ ಅವರು ಯೋಜನೆಗೆ ಸೇರಿದ ದಿನಾಂಕದ ಆಧಾರದ ಮೇಲೆ ಹಿರಿತನವನ್ನು ಗೊತ್ತುಪಡಿಸಿ, ರಾಜ್ಯ ಜೇಷ್ಠತಾಪಟ್ಟಿಯನ್ನು ಗಣಕ ಯಂತ್ರದ ಮೂಲಕ ತಯಾರಿಸಲಾಗಿದೆ. ವಿದ್ಯಾರ್ಹತೆ ಮತ್ತು ಅವರ ಜೇಷ್ಠತೆಯ ಆಧಾರದ ಮೇರೆಗೆ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 'ಸಿ' ಗುಂಪಿನ ಹುದ್ದೆಗಳಿಗೆ ಹೆಸರುಗಳನ್ನು ಸೂಚಿಸುವುದಕ್ಕೆ ಈಗಾಗಲೇ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಮೇಲೆ ಹೇಳಿರುವ ಹಿನ್ನೆಲೆಯಲ್ಲಿ ಮಿತವೇತನ ಪದವೀಧರರನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರದಿಂದ ಎಲ್ಲಾ ಪ್ರಯತ್ನಗಳನ್ನು ಮಾಡಲಾಗಿದೆ. ಮಿತವೇತನ ಪದವೀಧರರಿಗೆ ಶೇಕಡ ೪೦ ರಷ್ಟು ಹುದ್ದೆಗಳನ್ನು ತುಂಬುವುದಕ್ಕಾಗಿ ವಿವಿಧ ನೇಮಕಾತಿ ಪ್ರಾಧಿಕಾರಗಳಿಂದ ಬಂದಿರುವ ಸುಮಾರು ೮೫೦ ಹುದ್ದೆಗಳಿಗೆ ಮಿತವೇತನ ಪದವೀಧರರ ಹೆಸರನ್ನು ಸೂಚಿಸುವ ಕ್ರಮವು ಮುಕ್ತಾಯದ ಹಂತದಲ್ಲಿದೆ. ಅತಿ ಶೀಘ್ರದಲ್ಲೇ ಈ ಹುದ್ದೆಗಳ ಹೆಸರುಗಳನ್ನು ಸೂಚಿಸಲಾಗುವುದು. ಇಂಥಿಷ್ಟೇ ಅವಧಿಯಲ್ಲಿ ಇವರ ಸೇವೆಯನ್ನು ಖಾಯಂ ಮಾಡುವ ಬಗ್ಗೆ ಹೇಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ಸ್ನೈಪಂಡರಿ ಪದವೀಧರರ ಸೇವೆಯನ್ನು ಖಾಯಂಗೊಳಿಸುವ ಪ್ರಶ್ನೆಯು ನೇಮಕಾತಿಯ ಹುದ್ದೆಯ ಸಂಖ್ಯೆಯನ್ನು ಅವಲಂಬಿಸಿದೆ.

೨ ಭೂ ಸುಧಾರಣಾ ಕಾಯ್ದೆ ಪ್ರಕಾರ ಕೃಷಿ ಕೂಲಿಕಾರರಿಗೆ ಅವರು ವಾಸಿಸುವ ಜಾಗದ ಹಕ್ಕು ನೀಡುವ ಬಗ್ಗೆ.

ಶ್ರೀಮತಿ ಮನೋರಮಾ ಮಾಧ್ವರಾಜ್.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಭೂಸುಧಾರಣಾ ಕಾಯಿದೆಯ ಪ್ರಕಾರ ಕೃಷಿ ಕೂಲಿಕಾರರಿಗೆ ಅವರ ವಾಸದ ಜಾಗದ ಹಕ್ಕು ನೀಡುವ ವ್ಯವಸ್ಥೆ ಇದೆ. ಆದರೆ ಅನೇಕ ಮಂದಿ ಕೃಷಿ ಕೂಲಿಕಾರರು ಅವಿದ್ಯಾವಂತರಾದ ಕಾರಣ ೨-ಎ ನಮೂನೆ ಅರ್ಜಿ ಸಲ್ಲಿಸುವ ಬದಲು ೭ನೇ ನಮೂನೆ ಅರ್ಜಿ ಸಲ್ಲಿಸಿದ್ದರಿಂದ ಹಕ್ಕಿನ ಬೇಡಿಕೆಯನ್ನು ತಿರಸ್ಕರಿಸಲ್ಪಟ್ಟಿತ್ತು. ಅನೇಕ ಕಡೆಗಳಲ್ಲಿ ದಾನಿಗಳು ತಾವಾಗಿಯೇ ಭೂಮಿ ನೀಡುವೆವೆಂಬ ಆಶ್ವಾಸನೆ ನೀಡಿ ನಂಬಿಸಿ, ಅರ್ಜಿ ಹಾಕಲು ಬಿಡಲಿಲ್ಲ. ಈಗ ಅವರನ್ನು ಆ ಜಾಗದಿಂದ ಓಡಿಸುವ ಸನ್ನಾಹ ನಡೆಯಬಹುದಿದೆ. ಗೇಣಿದಾರ ಒಕ್ಕಲುಗಳಿಗೆ ೭ನೇ ನಮೂನೆ ಅರ್ಜಿ ಸಲ್ಲಿಸಲು ಸಮಯಾವಕಾಶ ವಿಸ್ತರಿಸಲಾಗಿತ್ತು. ಈ ಅವಕಾಶ ೨-ಎ ನಮೂನೆ ಅರ್ಜಿದಾರರಿಗೆ ಸಾಕಷ್ಟು

ಇರಲಿಲ್ಲ. ಇದರಿಂದಾಗಿ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೊಂದು ಜ್ವಲಂತ ಸಮಸ್ಯೆಯಾಗಿದೆ. ಈ ಸಹಸ್ರಾರು ಭೂಹೀನ ಬಡ ಕೃಷಿ ಕೂಲಿಕಾರರಿಗೆ ನ್ಯಾಯಬದ್ಧವಾದ ಮನೆ ನಿವೇಶನದ ಹಕ್ಕು ನೀಡಲು ಆರ್ಜಿ ಸಲ್ಲಿಸುವ ಅವಧಿಯನ್ನು ಮತ್ತೊಮ್ಮೆ ವಿಸ್ತರಿಸಿ, ಅವಕಾಶ ಕಲ್ಪಿಸಬೇಕು. ಆರ್ಥಿಕವಾಗಿ ಇವರಿಗಿಂತ ಮೇಲ್ಮಟ್ಟದಲ್ಲಿರುವ ನಗರಪ್ರದೇಶದ ಬಾಡಿಗೆದಾರರಿಗೆ ರಕ್ಷಣೆಯ ಕಾನೂನು ಇದ್ದು, ಹಳ್ಳಿಯ ಬಡವರಿಗೆ ಯಾವ ರಕ್ಷಣೆಯೂ ಇಲ್ಲದಿರುವುದು ಶೋಚನೀಯ. ಆರ್ಜಿಹಾಕುವ ಸಮಯ ವಿಸ್ತರಿಸಬೇಕು. ಶಿಕ್ಷಲೆಬ್ಬಿಸದಂತೆ ರಕ್ಷಣೆ ನೀಡಬೇಕು. ಬಡ ಕೃಷಿ ಕೂಲಿಕಾರರಿಗಾಗುತ್ತಿರುವ ಅನ್ಯಾಯವನ್ನು ತಪ್ಪಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ). —ಮಾನ್ಯ ಅಧ್ಯಕ್ಷರೆ, ಸದರಿ ಪ್ರಶ್ನೆ ಬಗ್ಗೆ ಹೆಚ್ಚಿನ ಪರಿಶೀಲನೆಯನ್ನು ಮಾಡಲಾಯಿತು. ಆರ್ಜಿ ಸಲ್ಲಿಸುವ ಅವಧಿಯನ್ನು ವಿಸ್ತರಿಸಿದಲ್ಲಿ ಜೋಪಾ ಹಾಗೂ ದುರದ್ದೇಶದಿಂ ಆರ್ಜಿಗಳನ್ನು ಹೆಚ್ಚಾಗಿ ಸಲ್ಲಿಸಬಹುದಾಗಿದ್ದರಿಂದ ಹಾಗೂ ಈಗಾಗಲೇ ವಿಸ್ತರಿಸಿದ ಅವಧಿ ಸಾಕಷ್ಟು ಇದ್ದು ಹೆಚ್ಚಿನ ಅವಧಿ ಸರಿ ಅಲ್ಲವೆಂದು ಕಂಡುಬಂದಿದ್ದು ಅವಧಿ ವಿಸ್ತರಿಸುವ ವಿಷಯವನ್ನು ಕೈಬಿಡಲಾಗಿದೆ.

೩ ಮಂಗಳೂರು ನ್ಯಾಯಾಲಯ ಸಮುಚ್ಚಯಕ್ಕೆ ಎರಡನೆಯ ಹಂತದ ವಿಸ್ತರಣೆ.

ಶ್ರೀ ಬ್ಲೇಸಿಯಸ್ ಎಂ. ಡಿ'ಸೋಜ.—ಮಾನ್ಯ ಅಧ್ಯಕ್ಷರೇ, ಮಂಗಳೂರಿನಲ್ಲಿರುವ ಕೋರ್ಟ್ ಕಾಂಪ್ಲೆಕ್ಸ್ ಕಟ್ಟಡಕ್ಕೆ ೨ನೇ ಹಂತದ ವಿಸ್ತರಣೆ ಅತಿ ಅಗತ್ಯ. ಈ ಕುರಿತು ಅನೇಕ ವರ್ಷಗಳಿಂದ ಸರಕಾರದ ಮುಂದೆ ಬೇಡಿಕೆ ಇದೆ. ಅನೇಕ ಬಾರಿ ಒತ್ತಾಯಿಸಲಾಗಿದೆ. ತಾರೀಖು ೨೨-೧೧-೮೫ರ ಸರ್ಕಾರಿ ಆಜ್ಞೆ ಪ್ರಕಾರ ರೂ.೧೨ ಲಕ್ಷದ ಕಾಮಗಾರಿಗೆ ಆಡಳಿತ ಮಂಜೂರಾತಿ ನೀಡಲಾಗಿದೆ. ದಿನಾಂಕ ೧೫-೧-೮೬ರಂದು ಮುಖ್ಯ ಇಂಜಿನಿಯರ್‌ರವರು ರೂ. ೧೩ ಲಕ್ಷಕ್ಕೆ ತಾಂತ್ರಿಕ ಮಂಜೂರಾತಿ ನೀಡಿದ್ದಾರೆ. ಆದರೆ ಕಳೆದ ಎರಡೂವರೆ ವರ್ಷಗಳಿಂದಲೂ ಈ ಕೆಲಸ ಪ್ರಾರಂಭ ಆಗಿಲ್ಲ. ನ್ಯಾಯಾಲಯ ಕಟ್ಟಡ ವಿಸ್ತರಣೆ ಆಗದಿರುವುದು ಪರಮ ಅನ್ಯಾಯ. ೨ನೇ ಹಂತದ ಕಾಮಗಾರಿ ಕೆಲಸಕ್ಕಾಗಿ ಕರ್ನಾಟಕ ಉಚ್ಚ ನ್ಯಾಯಾಲಯದವರು ಸರ್ಕಾರದ ಗಮನ ಸೆಳೆದಿದ್ದಾರೆ. ಆದ್ದರಿಂದ ಕಾಮಗಾರಿ ಕೂಡಲೇ ಪ್ರಾರಂಭವಾಗಬೇಕು, ನ್ಯಾಯಾಲಯ ಕಟ್ಟಡ ರಚನೆಯಲ್ಲಿ ನ್ಯಾಯ ದೊರಕಬೇಕು ಎಂದು ಸರಕಾರವನ್ನು ನಾನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಆಹಾರ ಸಚಿವರು).—ಸರ್ಕಾರವು ೧೯೮೫-೮೬ನೇ ಸಾಲಿನಲ್ಲಿ ಮಂಗಳೂರಿನ ನ್ಯಾಯಾಲಯ ಸಮುಚ್ಚಯಕ್ಕೆ, ಹೊಂದಿಕೊಂಡ ಕಟ್ಟಡದ ಮೇಲೆ ಎರಡನೇ ಹಂತದ ನಿರ್ಮಾಣಕ್ಕಾಗಿ ನಕ್ಷೆಗಳು ಮತ್ತು ೧೨-೦೦ ಲಕ್ಷ ರೂಪಾಯಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ. ಹಣದ ಕೊರತೆಯಿಂದಾಗಿ, ಮಂಗಳೂರಿನಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ೧೯೮೫-೮೬ನೇ ಸಾಲಿನ ಬಜೆಟ್‌ನಲ್ಲಿ ನಿರ್ಧಾರ ಮಾಡುವುದು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಆದರೆ ಪ್ರಸ್ತುತ ವರ್ಷದಲ್ಲಿಯೇ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ೧೯೮೫ರ ಡಿಸೆಂಬರ್‌ನಲ್ಲಿ ಪೂರಕ ಅನುದಾನಗಳ ಅಡಿಯಲ್ಲಿ ನಿರ್ಧಾರ ಮಾಡಲು ಹಣಕಾಸು ಇಲಾಖೆಯೊಂದಿಗೆ ಸಮಾಲೋಚಿಸುತ್ತಿದ್ದೇವೆ.

೪ ಮಂಗಳೂರಿನ ಹಳೆಯ ಬಂದರಿನ ಅಳಿವೆ ಬಾಗಿಲಿನಲ್ಲಿ ಹೂಳೆತ್ತದೆ ಇದ್ದುದರಿಂದ ಮೀನುಗಾರರ ದೋಣಿಗಳಿಗೆ ಹಾನಿಯಾಗಿ ಪ್ರಾಣ ನಷ್ಟವಾಗಿರುವುದಿನ್ನು.

ಶ್ರೀ ಬಿ.ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಮಂಗಳೂರು ಹಳೆ ಬಂದರಿನ ಅಳಿವೆ ಬಾಗಿಲಿನಲ್ಲಿ ಹೂಳೆತ್ತದೆ ಇದ್ದುದರಿಂದ ಕಳೆದ ನಾಲ್ಕೈದು ವರ್ಷಗಳಿಂದ, ಮಳೆಗಾಲ ದಿನ್ನೆಗೆ ತಾಗಿ ಸಮುದ್ರಕ್ಕೆ ಗಟ್ಟಲೆ ಮೀನುಗಾರರ ದೋಣಿಗಳು ನಾಶವಾಗಿವೆ. ೧೫ಕ್ಕೂ ಮಿಕ್ಕಿ